ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶುಕ್ರವಾರ ೧೧ನೇ ಸೆಪ್ಟೆಂಬರ್ ೧೯೮೭ ಭಾದ್ರಪದ ೨೦೧೯, ಶಕ.

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೯-೦೦ ಗಂಟೆಗೆ ಸಮಾವೇಶಗೊಂಡಿತು.

[ಮಾನ್ಯ ಅಧ್ಯಕ್ಷರು, (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದ್ದರು]

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ಉತ್ತರ ನೀಡಲಾಯಿತು.

ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಬೀಡಿ ಕಾರ್ಮಿಕರಿಗೆ ಸರ್ಕಾರದ ಸೌಲಭ್ಯಗಳನ್ನು ಒದಗಿಸುವ ಬಗ್ಗೆ.

೧೭೭. ಶ್ರೀ ಬಿ. ಹೆಚ್, ಯುಂಕಾನಾಯ್ಕ್ (ಹರಪನಹಳ್ಳಿ).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನಲ್ಲಿ ಸುಮಾರು ೨೦,೦೦೦ ಜನರು ಬೀಡಿ ಕಾರ್ಮಿಕರಿರುವುದು ನಿಜವೇ ?

೨) ಸದರಿ ಬೀಡಿ ಕಾರ್ಮಿಕರಿಗೆ ಸ್ವಂತ ಮನೆ ಇಲ್ಲದ ಪಂಥ್ರ ಬಡ ಸ್ಥಿತಿಯಲ್ಲಿರುವವರಿಗೆ ಉಚಿತ ನಿವೇಶನ ಕಷ್ಟ ಉಚಿತ ವೈದ್ಯಕೀಯ ಚಿಕಿತ್ಸೆಯ ಸೌಲಭ್ಯಗಳನ್ನೊದಗಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

೩) ಈ ಬಗ್ಗೆ ಸರ್ಕಾರದವರು ಯಾವುದಾದರೂ ಯೋಜನೆ ಕೈಗೊಂಡಿರುವರೆ ?

೪) ಹಾಗಿದ್ದಲ್ಲಿ, ಆ ಯೋಜನೆಗಳಾವುವು ?

ಶ್ರೀ ಎಸ್. ಕೆ. ಕಾಂತಾ (ಕಾರ್ಮಿಕ ಸಚಿವರು).—

೧) ಹರಪನಹಳ್ಳಿಯಲ್ಲಿ ಸುಮಾರು ಎರಡು ಸಾವಿರ ಬೀಡಿ ಕಾರ್ಮಿಕರು ಮಾತ್ರ ಇದ್ದಾರೆ.

೨) ರಾಜ್ಯದಲ್ಲಿಯ ಬಡ ಬೀಡಿ ಕಾರ್ಮಿಕರಿಗೆ ಉಚಿತ ನಿವೇಶನದ ಬಗ್ಗೆ ಸರ್ಕಾರದ ಮಟ್ಟದಲ್ಲಿ ಹಲವಾರು ಸಭೆಗಳು ನಡೆದಿದ್ದು ಸದರಿ ಸಭೆಯಲ್ಲಿ ಇನ್ನೂ ೩ ರಿಂದ ೫ ವರ್ಷಗಳ ಅವಧಿ ಒಳಗೆ ರಾಜ್ಯದಲ್ಲಿಯ ಬಡ ಬೀಡಿ ಕಾರ್ಮಿಕರನ್ನು ಗುರುತಿಸಿ ಸದರಿ ಸೌಲಭ್ಯವನ್ನು ಒದಗಿಸುವಂತೆ ಸರ್ಕಾರಕ್ಕೆ ವರದಿಯನ್ನು ಒಪ್ಪಿಸಲು ಈಗಾಗಲೇ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ (ಕರ್ನಾಟಕ ಗೃಹ ಮಂಡಳಿ ಮತ್ತು ಕಾರ್ಮಿಕ ಆಯುಕ್ತರು, ಬೆಂಗಳೂರು) ಇವರಿಗೆ ಪತ್ರಗಳನ್ನು ಬರೆದಿದೆ. ಆದರಲ್ಲಿ ಬಳ್ಳಾರಿ, ಹರಪನಹಳ್ಳಿ ತಾಲ್ಲೂಕಿನ ಬೀಡಿ ಕಾರ್ಮಿಕರಿಗೂ ಈ ಸೌಲಭ್ಯವನ್ನು ವಿಸ್ತರಿಸಲಾಗುವುದು. ಇನ್ನು ಉಚಿತ ವೈದ್ಯಕೀಯ ಚಿಕಿತ್ಸೆ ಸೌಲಭ್ಯಗಳನ್ನು ಕೇಂದ್ರ ಸರ್ಕಾರದ ಕಲ್ಯಾಣ ಮಂಡಳಿಯಿಂದ ಒದಗಿಸಲಾಗುತ್ತಿದೆ.

೩) ರಾಜ್ಯ ಸರ್ಕಾರದಿಂದ ಪ್ರತ್ಯೇಕವಾಗಿ ಯಾವ ಯೋಜನೆಯೂ ಅಗತ್ಯವಿರುವುದಿಲ್ಲ. ಕಾರಣ ಬಡ ಬೀಡಿ ಕಾರ್ಮಿಕರಿಗೆ ಕೇಂದ್ರ ಸರ್ಕಾರದ ಕಲ್ಯಾಣ ಮಂಡಳಿಯಿಂದ (ಅನುಬಂಧದಲ್ಲಿ ಕಾಣಿಸಿರುವ) ಅನೇಕ ಯೋಜನೆ ಸೌಲಭ್ಯವಿರುತ್ತದೆ.

೪) ಉದ್ಭವಿಸುವುದಿಲ್ಲ.

ಅನುಬಂಧ–ಎ

ಬೀಡಿ ಕಾರ್ಮಿಕರ ಕಲ್ಯಾಣ ನಿಧಿಯಲ್ಲಿ ನಿಯೋಜಿಸಲಾದ ಯೋಜನೆಗಳ ನೋಟ.

೧. ವೈದ್ಯಕೀಯ ಯೋಜನೆ:

೧ ಕ್ಷಯ : ಟಿ. ಬಿ. ಆಸ್ಪತ್ರೆಗಳಲ್ಲಿ ಹಾಸಿಗೆ ಕಾದಿರಿಸುವುದು.

೨ ಸಂಚಾರಿ ಆಸ್ಪತ್ರೆ ಘಟಕ.

೩ ಕಾರ್ಮಿಕರಿಗೆ ಕನ್ನಡಕ ಸೌಲಭ್ಯ.

೪ ಹೃದ್ರೋಗ ಚಿಕಿತ್ಸೆ.

೫ ಟಿ. ಬಿ. ರೋಗಿಗಳಿಗೆ ವಾಸಸ್ಥಳದಲ್ಲಿಯೇ ಶುಶ್ರೂಷೆ ನೀಡುವುದು.

೬ ಅರ್ಬುದ ರೋಗದಿಂದ ನರಳುವ ಬೀಡಿ ಕಾರ್ಮಿಕರಿಗೆ (ಮನೆಯಲ್ಲಿ ಬೀಡಿ ಕಟ್ಟುವವರನ್ನು ಒಳಗೊಂಡು) ವೈದ್ಯಕೀಯ ವೆಚ್ಚವನ್ನು ಪುನರ್ ಪಾವತಿ ಮಾಡಿಕೊಳ್ಳಲು ಅವಕಾಶ ವಿರುತ್ತದೆ.

೨. ವಸತಿ ಯೋಜನೆ:

೧ ಸ್ವತಃ ಮನೆ ಕಟ್ಟಿಕೊಳ್ಳುವ ಯೋಜನೆ.

೨ ಬಡ ಬೀಡಿ ಕಾರ್ಮಿಕರಿಗೆ ಮನೆಗಳ ಸೌಲಭ್ಯ.

೩ ಕೆಲಸದ ಶೆಡ್ ಮತ್ತು ಗೋಡೌನ್‌ಗಳನ್ನು ನಿರ್ಮಿಸಿಕೊಳ್ಳಲು ಬೀಡಿ ಕಾರ್ಮಿಕರ ಸಹಕಾರ ಸಂಘಗಳಿಗೆ ಸಹಾಯಧನ ಒದಗಿಸುವುದು.

೩. ಶಿಕ್ಷಣ ಯೋಜನೆ:

೧ ಬೀಡಿ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿವೇತನ ನೀಡುವುದು.

೨ ಬೀಡಿ ಕಾರ್ಮಿಕರ ಮಕ್ಕಳಿಗೆ ಒಂದು ಜೊತೆ ಬಟ್ಟೆಗಾಗಿ ಹಣ ಸಹಾಯ.

೪. ಮನರಂಜನೆ ಯೋಜನೆ:

೧ ಚಿತ್ರಗಳನ್ನು ತೋರಿಸಲು ಆಡಿಯೋ ವಿಜುಯಲ್ ಸೆಟ್ ಇರುವ ಸಂಚಾರಿ ಗಾಡಿ ಸೌಲಭ್ಯ.

೨ ಪಂದ್ಯಾಟಗಳು, ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ವ್ಯವಸ್ಥೆ.

೩ ಬೀಡಿ ಸಹಕಾರ ಸಂಘಗಳಲ್ಲಿ ದೂರದರ್ಶನ ವ್ಯವಸ್ಥೆ.

ಶ್ರೀ ಬಿ. ಹೆಚ್. ಯಂಕಾನಾಯಕ್.—ಹರಪನಹಳ್ಳಿ ತಾಲ್ಲೂಕಿನಲ್ಲಿರತಕ್ಕ ಬೀಡಿ ಕಾರ್ಮಿಕರಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಸೇರಿ ತಲಾ ೨೦ ಸಾವಿರ ರೂಪಾಯಿಗಳನ್ನು ಮನೆ ಕಟ್ಟಲಿಕ್ಕೆ ಮತ್ತು ಅಂಗಡಿಗಳನ್ನು ಇಡಲಿಕ್ಕೆ ಕೊಡುತ್ತೇವೆಂದು ಮಾನ್ಯ ಸಚಿವರು ೧೯೮೩ನೇ ಚುನಾವಣೆಯಲ್ಲಿ ಭಾಷಣ ಮಾಡಿದ್ದರು. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಸೇರಿ ಹರಪನಹಳ್ಳಿ ತಾಲ್ಲೂಕಿನಲ್ಲಿರತಕ್ಕ ೨೦ ಸಾವಿರ ಜನ ಬೀಡಿ ಕೂಲಿಕಾರರಿಗೆ ಏನೇನು ಸೌಲಭ್ಯಗಳನ್ನು ಕಲ್ಪಿಸಿಕೊಡುತ್ತೀರಿ ಎಂದರೆ ಆ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ಬಡರೈತರನ್ನು, ಕಾರ್ಮಿಕರನ್ನು ಉದ್ಧಾರ ಮಾಡುತ್ತೇವೆಂದು ಹೇಳುತ್ತೀರಿ, ಕೆಲಸ ಕೊಡುತ್ತೇವೆಂದು ಹೇಳುತ್ತೀರಿ, ಆದರೆ ಅವರು ಕೆಲಸ ಇಲ್ಲದೆ ನಿರುದ್ಯೋಗಿಗಳಾಗಿದ್ದಾರೆ.

ಶ್ರೀ ಎಸ್. ಕೆ. ಕಾಂತಾ.—ಗೃಹ ನಿರ್ಮಾಣ ಮಂಡಲಿಯಂವರಿಗೆ ಈ ಒಂದು ಕೆಲಸವನ್ನು ವಹಿಸಿಕೊಡಲಾಗಿದೆ. ಈ ದಿಸೆಯಲ್ಲಿ ಸರ್ಕಾರ ಒಂದು ನೋಟಿಫಿಕೇಷನ್ ಮಾಡಿದೆ. ಅದು ಈ ರೀತಿ ಇದೆ.

"As decided in the meetings held above the Government of Karnataka appeals to nominate the Karnataka Housing Board as the analysing agency to formulate and implement and also to frame the annual programmes in consultation with the Housing and Urban Development preferably before the commencement of each financial year.

ಮನೆಗಳನ್ನು ಕಟ್ಟುತಕ್ಕ ಯೋಜನೆ ಏನಿದೆ ಇದಕ್ಕೆ ಕೇಂದ್ರ ಸರ್ಕಾರದಿಂದ ಒಂದು ಮನೆಗೆ ೫ ಸಾವಿರ ರೂಪಾಯಿನಂತೆ ಕೊಡಲಾಗುತ್ತದೆ. ಈ ಯೋಜನೆಗೆ ಕೆಲವನ್ನು ಐಡೆಂಟಿಫೈ ಮಾಡಿದ್ದೇವೆ. ಅದರಲ್ಲಿ ಹರಪನಹಳ್ಳಿ ಬರಲಿಲ್ಲ. ಈಗಾಗಲೇ ೪೨೫ ಮನೆಗಳನ್ನು ಚಾಮರಾಜನಗರದಲ್ಲಿ ಕಟ್ಟಲಾಗಿದೆ. ಅದನ್ನು ಅವರ ವಶಕ್ಕೆ ಕೊಡುವ ವ್ಯವಸ್ಥೆ ಮಾಡಲಾಗುತ್ತಿದೆ.

ಶ್ರೀ ಬಿ. ಹೆಚ್. ಯಂಕಾನಾಯಕ್.—ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಕೊಟ್ಟಿದ್ದೀರಿ ? ಬಳ್ಳಾರಿ ಜಿಲ್ಲೆಯಲ್ಲಿ ಯಾವ ತಾಲ್ಲೂಕಿಗೆ ಕೊಟ್ಟಿದ್ದೀರಿ ? ಯಾವ ಯಾವ ತಾಲ್ಲೂಕುಗಳಿಗೆ ಕೇಂದ್ರ ಸರ್ಕಾರದವರು ಸಹಾಯ ನೀಡಿದ್ದಾರೆ.

ಶ್ರೀ ಎಸ್. ಕೆ. ಕಾಂತಾ.—ಆ ವಿವರಗಳು ಈಗ ಇಲ್ಲ. ಬಳ್ಳಾರಿ ಜಿಲ್ಲೆಯಲ್ಲಿ

"Government of Karnataka has conveyed its approval for the grant of 3.60 acres of land in Survey No. 1015."

ಮುಂದೆ ಯಾವ ರೀತಿ ಕಾರ್ಯ ಮಾಡಬೇಕೆಂಬುದನ್ನು ಹೌಸಿಂಗ್ ಬೋರ್ಡ್‌ನವರಿಗೆ ವಹಿಸಿ ಕೊಡಲಾಗುತ್ತದೆ.

ಶ್ರೀ ಪಂಪಾಪತಿ —ಬೀಡಿ ಕಾರ್ಮಿಕರು ಇಡೀ ರಾಜ್ಯಾದ್ಯಂತ ಇದ್ದಾರೆ. ಅದು ಒಂದು ಗೃಹ ಕೈಗಾರಿಕೆ. ಅದರಲ್ಲಿ ಹೆಚ್ಚಾಗಿ ಸ್ತ್ರೀಯರು ಕೆಲಸ ಮಾಡುತ್ತಾರೆ. ಬೀಡಿ ಕೈಗಾರಿಕೆಯಲ್ಲಿ ಅವರ ಶೋಷಣೆ ಯಥೇಚ್ಛವಾಗಿ ನಡೆಯುತ್ತಿದೆ. ಅವರಿಗೆ ಸರ್ಕಾರ ನಿಗದಿ ಮಾಡಿದ ಕೂಲಿ ಸಿಗುತ್ತಿಲ್ಲ. ಕಾರ್ಮಿಕ ಇಲಾಖೆಯ ಅಧಿಕಾರಿಗಳು ಕೂಡ ಆ ಬಗ್ಗೆ ಸರಿಯಾಗಿ ಪರಿಶೀಲಿಸುತ್ತಿಲ್ಲ. ಅವರಿಗೆ ಬೋನಸ್ ಕೊಡಬೇಕಾಗುತ್ತದೆ, ರಜಾ ಸೌಲಭ್ಯ ಕೊಡಬೇಕಾಗುತ್ತದೆ. ಆದರೆ ಯಾವುದನ್ನು ಕೊಟ್ಟಿಲ್ಲ. ಮನೆ ಕಟ್ಟುವುದು ಬಹಳ ನಿಧಾನ. ಕಾರ್ಮಿಕ ಕಲ್ಯಾಣ ನಿಧಿಯಿಂದ ಅನೇಕ ಸವಲತ್ತುಗಳನ್ನು ಒದಗಿಸಬಹುದು. ಬೀಡಿ ಕಾರ್ಮಿಕರಿಗೆ ಟಿ. ಬಿ. ಬರುವುದು ಜಾಸ್ತಿ. ಆದ್ದರಿಂದ ಅವರ ಆರೋಗ್ಯದ ಕಡೆಗೆ ಸರ್ಕಾರ ಹೆಚ್ಚು ಗಮನ ಕೊಟ್ಟು ಬೀಡಿ ಕಾರ್ಮಿಕರು ಎಲ್ಲೆಲ್ಲಿದ್ದಾರೆ, ಅಲ್ಲಿ ಅವರಿಗೆ ಆಸ್ಪತ್ರೆಗಳನ್ನು ತೆರೆಯತಕ್ಕ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಕೆ. ಕಾಂತಾ.— ಅಧ್ಯಕ್ಷರೆ, ಎಲ್ಲೆಲ್ಲಿ ಆವಶ್ಯ ಇದೆ ಅಲ್ಲಿ ತೆರೆಯಲಾಗಿದೆ. ಹೊಸದಾಗಿ ಏನಾದರೂ ಸೂಚನೆ ಕೊಟ್ಟರೆ ಅದನ್ನು ಪರಿಗಣಿಸುತ್ತೇವೆ.

ಸವದತ್ತಿ ತಾಲ್ಲೂಕಿನ ವ್ಯವಸಾಯೋತ್ಪನ್ನ ಮಾರಾಟಕ್ಕೆಯಲ್ಲಿ ಹಣದ ದುರುಪಯೋಗ

೬೨೨. ಶ್ರೀ ಚಂದ್ರಶೇಖರ್ ಮಾಮನಿ (ಪರಸಗಡ).— ಮಾನ್ಯ ಸಹಕಾರ ಮಂತ್ರಿಗಳು ಈ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೌಂದತ್ತಿ ತಾಲ್ಲೂಕು ವ್ಯವಸಾಯೋತ್ಪನ್ನ ಸಹಕಾರ ಮಾರಾಟ ಸಂಘದಲ್ಲಿ ದೊಡ್ಡ ಪ್ರಮಾಣದಲ್ಲಿ ಹಣ ದುರುಪಯೋಗವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?